M. Iss.

॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥

ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೧೧ ನೆ ಆಗಸ್ಟ್ ೧೯೨೫. [ಸಂಚಿಕೆ ೩೧

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಗಂಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ಎಲ್ಲಾ ತರಹ ಮುರಬ್ಬಾಗಳು, ಎಲ್ಲಾ ತರಹದ ಷರಬತ್ತುಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿ ಕಡಮೆಯಾಗಿಯೂ, ಪದಾರ್ಥಗಳು ಸಂಬಿಕೆಯಾಗಿಯೂ ಇರುತ್ತವೆ. ಅಪೇಕ್ಷಿಸುವವರು ತರಿಸಿಕ್ಕೊಳ್ಳಬೇಕಾಗಿ ಪ್ರಾರ್ಥನೆ. [22-5]

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್
ಸುಗಂಧಕಾರಿಗಳು, ಮೈಸೂರು

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್‌ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು.

MYSORE GOVERNMENT LOAN BONDS & Shares of Companies BOUGHT & SOLD

For particulars apply to:—
THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದುಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು೧ ಕ್ಕೆ(ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು,

Rosehead Necklaces

ಮುತ್ತಿನ ಕಂಠೀಹಾರಗಳು

ಈ ಮುತ್ತುಗಳು ಜೆನ್ನಾಗಿ ಹೊಳಪುಳ್ಳವುಗಳಾಗಿವೆ. ನೋಡಲು ಅತಿ ಸುಂದರವಾಗಿವೆ. ಇವನ್ನು ನಿಜವಾದ ಅಥವ ಇಮಿಟೇರ್ಷ ಮುತ್ತುಗಳೊಡನೆ ಹೋಲಿಸಿ ನೋಡಿ, ಒಳ್ಳೇ ಮುತ್ತುಗಳಿಗಿಂತ ಕೀಳೆಂದುತೋರಿದರೂ, ಇಮಿಟೇರ್ಷ ಮುತ್ತುಗಳಿಗಿಂತ ಉತ್ತಮವಲ್ಲವೆಂದು ತೋರಿದರೂ ೮ ದಿನಗಳೊಳಗೆ ವಾಪ್ಸು ಮಾಡಿದಲ್ಲಿ ನಿಮ್ಮ ಹಣ ವಾಪ್ಸುಮಾಡಲಾಗುವುದು ಚಿನ್ನದ ಕೊಂಡಿಗಳಿಂದ ಸೇರಿಸಿರುವ ೧೮ ಅಂಗುಲದ ಈ ಹಾರವನ್ನು ವಿ. ಪಿ. ಮೂಲ್ಯ ೮ ರೂಪಾಯಿಗಳಿಗೆ ಸರವನ್ನಿಡಲು ಒಂದು ಅಂದವಾದ ಪೆಟ್ಟಿಗೆಯನ್ನು ಉಚಿತವಾಗಿ ಕೊಡಲಾಗುತ್ತೆ. ಕೆಲವು ಮಾತ್ರ ಮಿಕ್ಕಿವೆ ಅನೇಕ ಮಾದರಿಯಲ್ಲಿಯೂ ವಿವಿಧ ಬಣ್ಣದ್ದಾಗಲಿ, ಸುವಾಸಿದವಾಗಿಯೂ ಇದೆ. ಕಗ್ಗತ್ತಲೆಯಲ್ಲಿಯೂ ಹೊಳೆಯುತ್ತದೆ. ಒಡವೆ ಜೊತೆಗೆ ಒಂದು ದೀಪವೂ ಮೊದಲು ಒಂದು ವಾರದಲ್ಲೇ ೨೨೦೦ ಕ್ಕೆ ಮೇಲ್ಪಟ್ಟು ಖರ್ಚಾಗಿದೆ. 14-7

'ಅಪ್ಪೂ' ಅಲ್ಯೂಮಿನಿಯಂ ಸೋಪು

ಯೂರೋಪಿನ ಒಂದುದೊಡ್ಡ ಕಾರ್ಖಾನೆಯಲ್ಲಿ ತಯಾರಾದ ಈಸಾಬೂನುಗಳು ಕೊಳೆಯಾದ ಅಲೂಮಿನಂ ಪಾತ್ರೆಗಳನ್ನು ತೊಳೆದು ಹೊಳೆಯುವಂತೆ ಮಾಡುತ್ತದೆ. ಒಂದು ಪೆಟ್ಟಿಗೆಯು ೧೦೦ ಪಾತ್ರೆಗಳನ್ನು ತೊಳೆಯಲು ಬರುತ್ತೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ.

ಕ್ರಯ ದೊಡ್ಡ ಪೆಟ್ಟಿಗೆ ೧ಕ್ಕೆ ರೂ ೧-೪-೦
ಚಿಕ್ಕ ಪೆಟ್ಟಿಗೆ ೧ಕ್ಕೆ ರೂ ೦—೧೦—೦

ಸೋಪಿಗೆ ಆರ್ಡರ್ ಕೊಡುವವರು ಪೂರ್ತಿ ಹಣವನ್ನು ಮುಂಗಡವಾಗಿ ರವಾನಿಸಬೇಕು.

Agencia Mercantil-y-Maritima,
INTERNATIONAL BUILDINGS,
LUDHIANA (Punjab)

Never too late to mend

The past, present and future Dictator

The wonderful mechanism of man here explained. Your future once more, why that beginning, wherefore this rise and fall the what of the next DO CONSULT. This astrologer determines all about your life before the curtain drops. The all is the research study of that beginning, the inductive and unique advisory of the rise and fall in current life, the what in future. This is combined in the knowledge—mature of the birth-time, the Zodaic sign commanding the planets, the constellation of star that lights the right way of life's attainment. Opportunity solicited with a hearty offer of trial. Beware others of this proclamation are little read in the agreement of life with its visible and invisible imbeded directors. Man in his pride of presumption has neglected to maintain his own life concurrently with the invisible and visible agencies, hence, the frustrations of his attempts to success. Success is only gained by man, the man that knows equally of the visible impediments which he wards easily and the invisible which he tries to attain but neglects. Fail not, neglect not and attain your wishes as the free-will man. The win's influences are imbeded in time The doctor advises only to the outer agreement but the honest way is lacking to explain the why of the failure. The astrologer alone can explain this in its detail and win you the life's battle as easy as the doctor's medicine, which proclaims to relieve. This foreword might appeal and lead you to our Astralogical Bureau, where your all-care is explained to heart's content. The heart the seat of divinity, the divine-wisdom is broken to your swallowing adversities by bits. Apply for the yearly, monthly, weekly and daily predictions; particulars on enquiry

Bidare Nanjundasastry and Brother
Astrologers, PARIMALA VILAS
Mysore

The Champion Metropolitan College of Commerce, Economics, Banking, etc.
YELWAL ROAD, MYSORE.
1925--26 Prospectus can be had free at the College or by post on receipt of ½ anna stamp to cover postage (5-6)

“ಸತ್ಯವಾದಿ”
೧೧ ನೆ ಆಗಸ್ಟ್ ೧೯೨೫

ಚಂದ್ರಗ್ರಹಣ

ಮೇಲ್ಕಂಡ ವಿಷಯದಲ್ಲಿ ನಾವು ನಮ್ಮ ಪತ್ರಿಕೆಯ ತಿಲಂ-೭-೨೫ ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿದ್ದ ಲೇಖನಕ್ಕೆ ಎದುರಾಗಿ ಮಃ॥ ರಾ॥ ಎಸ್ ಎಕ್ ಜ್ಯೋತಿಷ್ಕರೆಂಬುವರು ಮೈಸೂರು ಸಂಪದಭ್ಯುದಯದ ೩, ೪ನೆ ಆಗಸ್ಟು ಸಂಚಿಕೆಗಳಲ್ಲಿ ತಮ್ಮ ಲೇಖನವನ್ನು ಪ್ರಕಟಿಸಿರುತ್ತಾರೆ. ಆ ಲೇಖನವನ್ನು ಸಾಂಗವಾಗಿ ಓದಿನೋಡಿದಲ್ಲಿ ಅದು ತರ್ಕಕ್ಕನುಸಾರವಾಗಿಲ್ಲವಾಗಿಯೂ ಕೇವಲ ವೈಷಮ್ಯಪೂರಿತವಾಗಿಯೂ ಇರುವುದೆಂದು ವ್ಯಕ್ತಪಡುತ್ತದೆ. ಅವರ ಲೇಖನದ ಪ್ರತಿಯೊಂದು ಭಾಗಕ್ಕೂ ಪ್ರತ್ಯುತ್ತರ ಬರೆಯಬೇಕೆಂದಿರುವಲ್ಲಿ ನಮ್ಮಲ್ಲಿಗೆ ಪತ್ರಸಂವಾದಕರೊಬ್ಬರು ಆ ವಿಷಯದಮೇಲೆ ತಮ್ಮ ಲೇಖನವೊಂದನ್ನು ಕಳಿಸಿಕೊಟ್ಟಿರುವರು. ಈ ಲೇಖನವು ಮಃ॥ ರಾ॥ ಎಸ್ ಎಕ್ ರವರ ಲೇಖನಕ್ಕೆ ಸರಿಯಾದ ಪ್ರತ್ಯುತ್ತರವಾಗಿ ಕಂಡು ಬಂದುದರಿಂದ ಆ ಲೇಖನವನ್ನು ಪೂರ್ತಿಯಾಗಿ ಬೇರೆ ಕಡೆ ಮುದ್ರಿಸಿರುತ್ತೇವಲ್ಲದೆ ನಮ್ಮ ಅಭಿಪ್ರಾಯವನ್ನು ನಮ್ಮ ಬಾತ್ಮಿದಾರರು ಅನುಮೋದಿಸಿರುವುದರಿಂದ ಪ್ರತ್ಯೇಕವಾಗಿ ಪುನಃ ಬರೆಯಬೇಕಾದ ಆವಶ್ಯಕತೆ ಇರುವುದಿಲ್ಲ.

—ಕಳೆದ ೬ ನೇ ತಾರೀಖಿನ ದಿನ ಸರ್ ಸುರೇಂದ್ರನಾಥ ಬಾನರ್ಜಿಯವರು ತಮ್ಮ ಗೃಹದಲ್ಲಿ ಮೃತಪಟ್ಟರೆಂದು ಕೇಳಿ ತುಂಬಾ ವಿಷಾದಿಸುತ್ತೇವೆ. ಈಗತಾನೇ ಚಿತ್ತರಂಜನ ದಾಸರ ಮರಣದಿಂದ ಶೋಕಸಾಗರದಲ್ಲಿ ಮುಣುಗಿದ ಇಂಡಿಯಾ ದೇಶಕ್ಕೆ ಬಾನರ್ಜಿಯವರ ಮರಣವು ಮತ್ತೂ ಶೋಕವನ್ನುಂಟುಮಾಡಿರುವುದು.

—ಮಿ॥ ಜಸ್ಟಿಸ್ ಕೆ. ರಾಮಸ್ವಾಮ್ಯೆಯಂಗಾರ್ಯರ ಅಕಾಲ ಮರಣದಿಂದ ಅವರ ಸಂಸಾರಕ್ಕೆ ಸಂಭವಿಸಿದ ದೊಡ್ಡ ಕಷ್ಟವನ್ನು ನಿವಾರಣೆ ಮಾಡುವ ಉದ್ದಿಶ್ಯ ನಮ್ಮ ಘನ ಹೊಂದಿದ ಮಹಾರಾಜರವರು ಅವರ ಪತ್ನಿಗೆ ತಿಂಗಳಿಗೆ ೧೭೦ ರೂಪಾಯಿನಂತೆಯೂ, ಅವರ ಮೂರು ಜನ ಮಕ್ಕಳಿಗೆ ಅವರ ವಿದ್ಯಾಭ್ಯಾಸ ಮುಗಿಯುವವರೆಗೂ ಪ್ರತಿಯೊಬ್ಬರಿಗೂ ತಿಂಗಳಿಗೆ ೫೦ ರೂಪಾಯಿಗಳನ್ನು ದಯಪಾಲಿಸಿರುವರು. ಇದನ್ನು ನೋಡಿದರೆ ನಮ್ಮ ಮಹಾರಾಜರವರು ತಮ್ಮ ರಾಜ್ಯದಲ್ಲಿ ಕೆಲಸ ಮಾಡುವ ಹುದ್ದೇದಾರರಲ್ಲಿ ಎಷ್ಟು ಅಭಿಮಾನವುಳ್ಳವರೆಂಬುದೂ ಎಷ್ಟು ಕರುಣಾಶಾಲಿಗಳೆಂಬುದೂ ಎಷ್ಟು ಹೇಳಿದರೂ ಸ್ವಲ್ಪವೇ!

—ಲಾರ್ಡ್ ಕರ್ಜನ್‌ರವರು ತಮ್ಮ “ವಿಲ್” ನ ಪ್ರಕಾರ ಜನಾಂಗಕ್ಕೆ ತಮ್ಮ ಲಿಂಕನ್ ಮೈರಿನ ಟಾಟರ್ ಷಲ್ ಕ್ಯಾಸಲ್ಲನ್ನು ಸಸೆಕ್ಸಿನ ಬೋಡಲಾಂ ಕ್ಯಾಸಲನ್ನೂ ಬಿಟ್ಟುಕೊಟ್ಟಿರುತ್ತಾರೆ.

—ಆಸ್ಟ್ರೇಲಿಯಾದೇಶದ ೨೦ ವರ್ಷ ವಯಸ್ಸಿನ ಇಬ್ಬರು ತರುಣಿಯರು ಆಫ್ರಿಕಾಖಂಡದ ದಕ್ಷಿಣಭಾಗದಿಂದ ಸುಮಾರು ೪೦೦೦ ಮೈಲಿಗಳ ದೂರದಲ್ಲಿ ಉತ್ತರದಲ್ಲಿರುವ ಕೈರೋಪಟ್ಟಣಕ್ಕೆ ಕಾಲ್ನಡಿಗೆಯಿಂದಲೇ ಪ್ರಯಾಣಹೊರಟಿರುವರು. ದೇಶವು ಇವರಿಗೆ ಹೊಸದು. ದಾರಿಯಲ್ಲಿ ಘೋರಾರಣ್ಯಗಳೂ ವಿಶಾಲವಾದ ನದಿಗಳೂ ಅನಾಗರಿಕರಾದ ಕಾಡುಜನರೂ ಕ್ರೂರಮೃಗಗಳಾದ ಆನೆ ಸಿಂಹ ಹಿಪ್ಪೋಪೊಟೇಮಸ್ ಗೊರಿಲ್ಲ ಮುಂತಾದ ಪ್ರಾಣಿಗಳಿರುವುವು.

ವೃತ್ತಾಂತಸಂಗ್ರಹ

—ಟ್ರಾನ್ಸ್‌ಜೋರ್‌ಡಾನಿಯಾವಿನಲ್ಲಿ ಹಾಜೀಟಹರ್ ಎಂಬಾತನು ವಾಸವಾಗಿರುವನೆಂದೂ, ಈತನಿಗೆ ಈಗ ೧೪೦ ವರ್ಷ ವಯಸ್ಸಾಗಿದೆಯೆಂದೂ, ನೆಪೋಲಿಯನ್ನನ್ನು ನೋಡಿರುವನೆಂದೂ, ಪ್ರಪಂಚದಲ್ಲೆಲ್ಲಾ ಈತನೆ ಬಹಳ ಹೆಚ್ಚು ವಯಸ್ಸಾದವನೆಂದೂ, ಕೈಕಾಲುಗಳು ಇನ್ನೂ ಗಟ್ಟುಮುಟ್ಟಾಗಿವೆಯೆಂದೂ, ಹೆಚ್ಚಾಗಿ ಊಟ ತಿಂಡಿ ಮಾಡುತ್ತಾನೆಂದೂ ವರ್ತಮಾನವನ್ನು ಮಿ॥ಫಿಲ್ಪ್ಸ್ ಎಂಬುವರು ರಾಯಲ್ ಜಿಯೊಗ್ರಾಫಿಕಲ್ ಸೊಸೈಟಿಗೆ ತಿಳಿಸಿರುತ್ತಾರೆ.

—ತುಂಬಾ ಎತ್ತರವಾಗಿ ಬೆಳೆಯುವ ಬೊಂಬುಗಳು ೧೨೦ ಅಡಿಗಳವರಿಗೂ ಬೆಳೆಯುವುದೆಂಡೂ ಮೊದಲು ಮೊದಲೇ ದಿನ ಒಂದಕ್ಕೆ ೧೫ಅಡಿಯಂತೆ ಬೆಳೆಯುವುದೆಂದೂ ತಿಳಿಯಬಂದಿದೆ.

—ಟಿಬೇಟಿನಲ್ಲಿರುವ ಎಲ್ಲಾ ಬುದ್ಧ ವಿಹಾರಕ್ಕಿಂತಲೂ ಅದ್ಭುತವಾದ ಒಂದು ವಿಹಾರವು ಈಗ ಅಲ್ಲಿ ಕಟ್ಟಲ್ಪಟ್ಟಿದೆ. ಅದರೊಳಗಿನ ಬುದ್ಧನ ವಿಗ್ರಹವು ತುಂಬಾ ಅಗಾಧವಾಗಿಯೂ, ರತ್ನಖಚಿತವಾಗಿಯೂ ಇರುತ್ತದೆ. ಈ ದೇವಾಲಯದ ಕಟ್ಟಡದ ಖರ್ಚಿಗಾಗಿ ಬಡವರೂ ಐಶ್ವರ್ಯವಂತರೂ ಕೈಲಾದ ಸಹಾಯ ಮಾಡಿರುತ್ತಾರಲ್ಲದೆ, ಕೂಲಿ ಕೆಲಸವು ಉಚಿತವಾಗಿ ದೊರೆಯಿತು.

—ಮಿಸ್ ಸ್ವಾನಿಪೊಯಲ್ ಎಂಬ ಟ್ರಾನ್ಸ್‌ವಾಲ್ ದೇಶಸ್ತೆಯು ನಿದ್ರಿಸಲು ಪ್ರಾರಂಭಿಸಿ ೧೫ ವರ್ಷವಾಯಿತಂತೆ! ಈಕಾಲದಲ್ಲಿ ಯಾವತ್ತೂ ಪೂರ್ತಾ ಜ್ಞಾನದಿಂದಿಲ್ಲವಂತೆ! ೧೫ ವರ್ಷದ ಹಿಂದೆ ಆವಳ ಗಂಡ ಸತ್ತು ಹೋದನೆಂದೂ, ಈ ರೀತಿ ಭುದ್ಧಿಭ್ರಮೆಯಿಂದ ಗಾಢನಿದ್ರೆಗೆ ತುತ್ತಾದಳೆಂತಲೂ, ಬಹಳ ಕೃಷಾಂಗಿಯಾಗಿರುವಳೆಂದೂ ಆ ಕಾಲದಲ್ಲಿ ಆಗಾಗ್ಗೆ ಆಹಾರವನ್ನು ಕೊಳವಿಗಳ ಮೂಲಕ ಕೊಡುತ್ತಿದ್ದರೆಂದೂ ವರ್ತಮಾನ!

—ತಾವಲ್‌ಪಿಂಡಿಯಲ್ಲಿ ಒಬ್ಬಾನೊಬ್ಬ ಇಂಗ್ಲೀಷ್ ರೈಲ್ವೆಗಾರ್ಡು ಮಿ॥ ಸ್ಪೈಲೀನ್ ಎಂಬಾತನು, ಕಾಲು ಜಾರಿ ಬಿದ್ದು ರೈಲಿಗೆ ಸಿಕ್ಕಿ ಹೋಗುತ್ತಿದ್ದ ಒಬ್ಬ ಹಿಂದೂ ಪ್ರಯಾಣಿಕನನ್ನು ಹಿಡಿದುಕೊಳ್ಳಲು ಹೋಗಿ, ತಾನು ರೈಲಿಗೆ ಸಿಕ್ಕಿ ಪ್ರಾಣಬಿಟ್ಟನು. ಇವನ ನಿಧನಕ್ಕೆ ಮಿಲಿಟರಿ ವಾದ್ಯಾದಿಗಳು ಬಂದಿದ್ದವು.

—ದಕ್ಷಿಣ ಮಲೆಯಾಳದಲ್ಲಿ ಕುಟ್ಟಿಪುರದ ಹತ್ತಿರದ ಶಿವದೇವಸ್ಥಾನದ ಬಳಿ ಒಂದು ಗುಹೆಯು ಕಂಡು ಹಿಡಿಯಲಾಗಿದೆ. ಬಹು ಜನರು ಹೋಗಿ ನೋಡಿ ಬರುತ್ತಿದ್ದಾರೆ.

—ಮದರಾಸಿನ ಲಯೋಲಾ ಕಾಲೇಜಿನ ವಿದ್ಯಾರ್ಥಿಯೊಬ್ಬನು ರೈಲು ಕಂಬಿಯ ಮೇಲೆ ಮಲಗಿ ರೈಲು ಅವನ ಮೇಲೆ ಹರಿದು ಆತ್ಮಹತ್ಯ ಮಾಡಿಕೊಂಡನು.

—ಬ್ರೂಕ್ಲಿನ್ನಿನ ಮೇರಿಮುರ್ಫಿ ಎಂಬಾಕೆಯು ತನ್ನ ವಯಸ್ಸಾದ ಗಂಡನ ಮೇಲೆ ಪ್ರೀತಿ ಕಡಿಮೆಯಾದುದರಿಂದ ಅವನನ್ನು ‘ಡೈವರ್ಸ್’ ಮಾಡಲು ಪುನಃ ಅರ್ಜಿ ಹಾಕಿದಾಳೆ. ಈಕೆಗೆ ಈಗ ೧೦೪ ವರ್ಷ ವಯಸ್ಸು ಈಗಾಗಲೆ ೩೨ ಸಾರಿ ಹೀಗೆ ಅರ್ಜಿಹಾಕಿದಾಳಂತೆ!

—ಈಜೆಗೆ ದಿವಾಳಿಯಾದ ಬೊಂಬಾಯಿನ ವಾಡಿಯಾವುಲನ್ ಮಿಲ್ಲು ಮತ್ತು ಇನ್ನೊಂದು ಮಿಲ್ಲನ್ನು ೪೦ ಲಕ್ಷರೂಪಾಯಿಗೆ ಒಬ್ಬ ಮದರಾಸಿನ ಸಾಹುಕಾರನು ಕೊಂಡುಕೊಂಡಿರುತ್ತಾನೆ.

—ಕಳೆದ ತಿಂಗಳು ೧೨ನೇ ತಾರೀಖಿನ ದಿನ ಲೈಲಾಸ ಜುದ್ರನ ದ್ವಿತೀಯ ಪುತ್ರಿಯಾದ ಅಲಾನ್ಯ ಪ್ರಭುದಾಸ ಗುಪ್ತ ಎಂಬುವಳು ತನ್ನನ್ನು ಮದುವೆಮಾಡುವ ವಿಷಯದಲ್ಲಿ ತನ್ನ ತಂದೆಗೆ ಪ್ರಾಪ್ತವಾದ ಕಷ್ಟನಿವಾರಣೆ ಉದ್ದಿಶ್ಯ ತಾನುಟ್ಟಿದ್ದ ಬಟ್ಟೆಯನ್ನು ಚೆನ್ನಾಗಿ ಸೀಮೆ ಎಣ್ಣೆಯಲ್ಲಿ ನೆನಸಿ ಬೆಂಕಿಹಚ್ಚಿಕೊಂಡು ಪ್ರಾಣತ್ಯಾಗ ಮಾಡಿರುವಳು. ಈಕೆಯು ಬೆಂಕಿ ಆರಿಸಿದನಂತರ ಕೆಲವು ಗಂಟೆಗಳ ಕಾಲ ಬದುಕಿದ್ದಳು. ಆ ಕಾಲದಲ್ಲಿ ಇವಳು ತಿಳಿಸಿದ ಕೆಲವು ವಿಷಯಗಳು ಬಹಳ ಹೃದಯವಿದಾರಕವಾಗಿರುವುವು. ಈಕೆಯ ತಂದೆಯು ಬಹಳ ಬಡವನು. ತನ್ನ ಮಗಳನ್ನು ಸರಿಯಾದ ವರನಿಗೆ ಕೊಟ್ಟು ಮದುವೆ ಮಾಡಲು ಅನುಕೂಲವಿರಲಿಲ್ಲ. ಇದೂ ಅಲ್ಲದೆ ಈಕೆಯು ಅಣ್ಣನು ತನ್ನ ತಂದೆಗೆ ಬರೆದ ಕಾಗದದಲ್ಲಿ ಮದುವೆಗೆ ಹಣ ಕಳುಹಿಸಲು ಅನುಕೂಲವಿಲ್ಲವೆಂದು ಬರೆದ ಸಂಗತಿಯನ್ನು ತಿಳಿದುಕೊಂಡು ಮನಸ್ಸಿನಲ್ಲಿ ಬಹಳ ನೊಂದುಕೊಂಡು ತನ್ನ ತಂದೆಗೆ ಇಂತಹ ಕಷ್ಟಕೊಡುವುದಕ್ಕಿಂತ ತಾನು ಸಾಯುವುದು ಲೇಸೆಂದು ಪ್ರಾಣತ್ಯಾಗ ಮಾಡಿದಳು.

—ಬರೋಡ ಸಂಸ್ಥಾನದ ಕಲೋಲ್ ಎಂಬ ಸ್ಥಳದಲ್ಲಿ ನೆಲವನ್ನು ಉಳುತ್ತಿರುವಾಗ ಬಹಳ ಮನೋಹರವಾದ ಎರಡು ಜೈನ ಪ್ರತಿಮೆಗಳು ಸಿಕ್ಕಿದೆವು. ಇದನ್ನು ನೋಡುವುದಕ್ಕೆ ಆನೇಕ ಸ್ಥಳಗಳಿಂದ ಬಹುಮಂದಿ ಜೈನರು ಬರುತ್ತಿರುವರು.

—ದರ್ಭಾಂಗದ ಒಂದುಪಾಠಶಾಲೆಯ ಒಂದನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯು ಪಾಠವಾಳವನ್ನು ಗುಂಡಿನಿಂದ ಹೊಡೆಯುತ್ತಿದ್ದಾಗ ಆಕಸ್ಮಾತ್ತಾಗಿ ಒಬ್ಬ ೧೨ ವಯಸ್ಸಿನ ಹುಡುಗನನ್ನು ಗುಂಡಿನಿಂದ ಹೊಡೆದ ಸಾಯಿಸಿದನೆಂದೂ, ಹುಡುಗನು ತಪ್ಪಿಸಿಕೊಂಡು ಹೋಗಿರುವನೆಂದೂ ಇವನ ದಸ್ತಗಿರಿ ಬಗ್ಗೆ ವಾರೆಂಟು ಹೊರಟಿರುವುದೆಂದೂ ತಿಳಿದುಬಂದಿದೆ.

—ಟೈನ್ಸಿನ ಲಿಸ್‌ಬರ್ನ್ ಬಾತ್ಮೀದಾರನಾದ ಜೆ. ಎಚ್. ಮೂರ್ಸೈಡ್ ಎಂಬುವನನ್ನು ಸುಳ್ಳುಸಮಾಚಾರ ಹಾಡಿದನೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಿದ್ದಕ್ಕಾಗಿ ಪೋರ್ಚುಗೀಸ್ ಸರ್ಕಾರದವರು ಬಹುಸಂಗನವಾಗಿ ಕ್ಷಮಾಪಣೆ ಬೇಡಿಕೊಂಡಿದ್ದಾರೆ.

ಈ ವರ್ಷದ ರಾಷ್ಟ್ರೀಯ ಸಭೆಯ ಅಧ್ಯಕ್ಷತೆಗೆ ಆಂಧ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಅರವಿಂದಘೋಷ್, ಸರೋಜಿನಿದೇವಿಯವರನ್ನೂ; ಸಿಂದೂದೇಶದ ಕಮಿಟಿಯವರು— ಅರವಿಂದಘೋಷ್, ಲಲಪಟ್‌ರಾಯ, ಸರೋಜನಿದೇವಿ, ಗಾಂಧಿ, ಕೇಳ್ಕರ್ ವರನ್ನು ಜುನಾಯಿಸಿರುತ್ತಾರೆ.

“ರೆಸಿಸ್ಟಾ” ಎಂಬ ಚಿಕ್ಕ ಹುಡಿಗಿಯನ್ನು ಭಯಿಂದ ಸ್ವಲ್ಪ ಮೇಲಕ್ಕೆ ಎತ್ತಲೂ ಪ್ರಪರಿಚು ಪ್ರಖ್ಯಾತ ಶಕ್ತಿವಂತರಿಗೂ ಕುಸ್ತಿಗಾರರಿಗೂ ಸಾಧ್ಯವಾಗಿಲ್ಲವಂತೆ. ಅದ್ಭುತಶಕ್ತಿಯು ಅವಳ ಮನಸ್ಥೈರ್ಯಕ್ಕೆ ಕಾರಣವೆಂದು ಅನೇಕರು ಅಂದುಕೊಳ್ಳುತ್ತಿರುತ್ತಾರೆ.

ಅಲಹಾಬಾದಿನ ಮುನಿಸಿಪಾಲಿಟಿಯ ಬೋರ್ಡು ಮಾಟಿಂಗಿಗೆ ಬರಲೂ, ಆಡ್ರಸ್ಸು ಕೊಡಲು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ಆಸ್ಪದ ಕೊಡಬೇಕೆಂದು ಅಲ್ಲಿ ಸರ್ಕಾರದವರು ಕೇಳಿದಕ್ಕೆ, ಬೋರ್ಡಿನವರು ಈ ಹೊಸ ಏರ್ಪಾಡು ತಮಗೆ ಸಮ್ಮತವಾಗಿಲ್ಲವೆಂದು ತಿಳಿಸಿರುತ್ತಾರೆ.

ಪತ್ರಸಂವಾದ

ಉಪಲೇಖಕರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ

ಚಂದ್ರಗ್ರಹಣ

ಮ|| ರಾ|| ಎಡಿಟರ್‌ರವರ ಸಮಕ್ಷಮಕ್ಕೆ.—

ಸ್ವಾಮಿ! ನಾನು ಈ ಚಂದ್ರಗ್ರಹಣ ವಿಚಾರದಲ್ಲಿ ಅನೇಕ ಪತ್ರಿಕೆಗಳಲ್ಲಿ (ಇಂಗ್ಲಿಷ್ ಮತ್ತು ಕನ್ನಡ) ವಿವಿಧ ಲೇಖನಗಳನ್ನು ಓದಿದೆನು. ಅವುಗಳಲ್ಲಿ ಸಂಪದಭ್ಯುದಯದ ೩ ಳನೇ ತಾರೀಖಿನ ಪತ್ರಿಕೆಗಳಲ್ಲಿ 'ಎಸ್ ಎಚ್' ಹ್ರಸ್ವನಾಮೋಲ್ಲೇಖನದಿಂದ ಬರೆಯಲ್ಪಟ್ಟದ್ದು ಮಾತ್ರ ವಿಜಾತೀಯವಾಗಿರುವುದು. ಇದರ ವಿಷಯದಲ್ಲಿ ಸ್ವಲ್ಪ ಬರೆಯಬೇಕಾಗಿರುವುದರಿಂದ ಈ ನನ್ನ ಅಭಿಪ್ರಾಯವನ್ನು ದಯಮಾಡಿ ತಮ್ಮ ಪತ್ರಿಕೆಯಲ್ಲಿ ಪ್ರಚುರಪಡಿಸುವಿರೆಂದು ಕೋರುವೆನು.

ಮ|| ರಾ|| 'ಎಸ್ ಎಚ್' ರವರ ಲೇಖನವು ೨೮-೭-೩೫ ನೇ ತಾರೀಖಿನ ಸತ್ಯವಾದಿ ಪತ್ರಿಕೆಯಲ್ಲಿನ ಅಗ್ರಲೇಖನಕ್ಕೆ ಖಂಡನ ರೂಪವಾಗಿರುವಂತೆ ಕಾಣುತ್ತ್ತ. ಮ|| 'ಎಸ್ ಎಚ್' ರವರಾರು? ತಮ್ಮ ಪೂರ್ಣ ನಾಮಾಂಕಿತವನ್ನೇಕೆ ಈ ರೀತಿ ಇಂಗ್ಲೀಷಾಕ್ಷರಗಳ ಮೂಲಕ ಸಂಕುಚಿತಮಾಡಿಕೊಂಡಿರುವರೋ ಕಾಣೆ. ಸತ್ಯವಾದಿಯಲ್ಲಿನ ಅಗ್ರಲೇಖನವು ಈ ಜೀವಿಯಿಶರನ್ನು ಸ್ವಗೃಹಗು ಹೆಯಿಂದೀಚೆಗೆ ಹೊರಡಿಸಿ ಕೋಪದಿಂದ ದಿಕ್ಕೆಡಿಸಿ ಈ ಖಂಡನ ರೂಪವಾದ ಲೇಖನದ ಮೂಲಕ ಅರ್ಧಟಿಸುವಂತೆ ಮಾಡಿದಹಾಗೆ ಕಾಣುತ್ತ್ತ. ಅಯ್ಯೋ ಪಾಪ! ಇವರಿಗೇಕೆ ಇಷ್ಟು ಪ್ರಕೋಪ? ಈ ಅಗ್ರಲೇಖನವು ತಮಗೇನೇ ಅನ್ವಯಿಸುವಂತೆ ಭಾವಿಸಿಕೊಂಡಂತೆ ತೋರುತ್ತ್ತ. ಹಾಗೆ ಇವರಿಗೇನೇ ಅನ್ವಯಿಸುವುದಾದರೆ ತಮ್ಮ ಹೆಸರನ್ನೇಕೆ ಹ್ರಸ್ವಮಾಡಿಕೊಂಡು ಅಕ್ಷರಗಳ ಮೂಲಕ ಇಂಗ್ಲೀಷರ ಮರೆಹೊಕ್ಕರು. 'ಎಸ್ ಎಚ್' ಎಂದು ಹೇಳಿಕೊಳ್ಳಬೇಕಾದರೆ ಬಹುಶಃ ಇವರು ಇಂಗ್ಲೀಷು ಭಾಷೆಯ 'essence' ಎಂಬ ಪದದ ತದ್ಭವರೂಪವಾಗಿರಬಹುದು. ಜ್ಯೋತಿಷ ಪೂರ್ಣ ಪಾಂಡಿತ್ಯಕ್ಕೆ ಪೂರ್ವವೇ ಜ್ಯೋತಿಷ್ಯದ ಸಾರವಾದವರಂತಾಗಿ 'ಸ್' ಎಂಬ ಅರ್ಧಾಕ್ಷರದಮೇಲೆ ಗಮನವಿಡದೆ ಲೋಪಮಾಡಿಕೊಂಡು 'ಎಸ್ ಎಚ್' ಎಂದು ಹೇಳಿಕೊಳ್ಳಲು ಈ ಉಪಾಯ ಹುಡುಕಿರಬಹುದು. ಇಷ್ಟು ಅರ್ಥಮಾಡಿದರೂ ಇವರ ಪೂರ್ಣ ಪರಿಚಯವು ನನಗೆ ಗೋಚರವಾಗಲಿಲ್ಲ. ಅದಂತಿರಲಿ. ತಮ್ಮ ಖಂಡನವು ತರ್ಕಾಲಂಕಾರ ವಿರುದ್ಧವಾದುದೆಂದು ಅವರು ತಮ್ಮ ಘನ ಲೇಖನವನ್ನು ಪುನಃ ಪುನಃ-ಓದಿಯೂ ಹಿಂದಿಸಿಯೂ ಯೋಚಿಸಿಕೊಂಡರೆ ಸ್ಪಷ್ಟವಾಗುತ್ತ್ತ. ಇವರ ಖಂಡನದ ಗಂಭೀರಾರ್ಥವನ್ನು ಗ್ರಹಿಸುವುದು ಸುಲಭಸಾಧ್ಯವಲ್ಲ. ಇವರು ಲೇಖನವನ್ನು ಲಂಬಿಸುತ್ತ ಬಂದಹಾಗೆಲ್ಲಾ 'ವಿಶಾಸೆಗಳ' ವತಾರವುಳ್ಳ ಮೂರ್ತಿಯು ಇವರ ಬುದ್ಧಿಗೆದುರಾಗಿ ನಿಂತು ತಮ್ಮವ ತಾರಗಳ ವರ್ಣನೆಯನ್ನು ವರ್ಣಿಸಬೇಕೆಂದು ಬೇಡಿದಂತೆ ತೋರುತ್ತ್ತ. ಪಂಚಾಂಗದಲ್ಲಿ ಚಂದ್ರಗ್ರಹಣದ ವಿಷಯ ಚರ್ಚೆಯು ಮಹತ್ತರವಾಗಿ ನಡೆಯುತ್ತಿರುವಲ್ಲಿ 'ಅಂಗ' ನೆಂಬ ಪದದ ಅರ್ಥವನ್ನು 'ದೇಹದಲ್ಲಿ' ಅನ್ವಯಿಸಿ 'ಅಂಗದಲ್ಲಿನ' ಅಂಶವಾದ 'ವಿಶಾಸೆ ಕೂದಲು' ಮುಂತಾದುವುಗಳನ್ನು ವರ್ಣಿಸುವುದಕ್ಕೆ ತೊಡಗಿಬಿಟ್ಟರು. ಇವರುತ್ತಮಸ್ಥಾನವನ್ನವಲಂಬಿಸಿದುದಕ್ಕೆ ಸಂತೋಷಿಸಬೇಕಲ್ಲವೆ? ಅಗ್ರಲೇಖನದ ಗೂಢಾರ್ಥವಾದ ಗಂಭೀರ ಭಾವವು ಇವರಿಗೆ ಮನಸಿತ್ತಲಿಲ್ಲವಾಗಿ ಮನಸ್ಸು ಹೊರಟು ಬಿಟ್ಟಿತು. ಇದಕ್ಕೆ ಕೋಪವೇ ಕಾರಣವಲ್ಲವೆ! ಕೋಪ ತಾಪ ಹೆಚ್ಚಿಸಿತು ಎಂಬಂತೆ ಕ್ಷಯ-ರೋಗಕ್ಕೆ ಅಂಕುರವಾದ ಉಷ್ಣರೂಪವಾದ ಕೋಪವೆಂಬ ವ್ಯಾಧಿಯಿಂದ ಪೀಡಿತರಾದೀ ಜೋಯಿಸರಿಗೆ ಆಯುರ್ವೇದ ವಿದ್ಯಾಭೂಷಣರಾದ ವೈದ್ಯರಿಂದ ಸರಿಯಾದ 'ಭೈಗವಿ' ಮಾತ್ರೆಯನ್ನು ಏಕೆ ಕೊಡಿಸಿ ಈಗಲೇ ರೋಗ ಪ್ರಬಲವಾಗದಂತೆ ತಡೆಮಾಡಲಾಗದು? ಇವರ ಖಂಡನಕ್ಕೆ ಪ್ರತಿಖಂಡನವು ನನ್ನ ಉದ್ದೇಶವಲ್ಲ. ಆದುದರಿಂದ ಈ ಲೇಖನವನ್ನು ಇವರು ಅನ್ಯಥಾ ಭಾವಿಸಲಾರರೆಂದು ನಂಬಿರುವೆನು.

ತಮ್ಮಂತೆ ಪತ್ರಿಕಾಕಾರರು ವಿದ್ವಾಂಸರಲ್ಲವೆಂತಲೂ ಸಂಸ್ಕೃತಜ್ಞಾನಿಗಳಲ್ಲವೆಂತಲೂ ಊಹಿಸುವುದು ಒಂದು ಪಕ್ಷದನುಮಾತು. ಪತ್ರಿಕಾಕಾರರು ಯಾವ ಪಕ್ಷವನ್ನೂ ವಹಿಸಿದಂತೆ ನನಗೆ ತೋರಲಿಲ್ಲ. ಹತ್ತೂ ಪಂಚಾಂಗಗಳು ಅವರಿಗೆ ವಿಮರ್ಶೆಗೆ ತಲಪಿ ಅವುಗಳೆಲ್ಲವನ್ನೂ ಪರಿಶೀಲಿಸಿ ತಮಗೆ ಸೂಕ್ತ ತೋರಿಬಂದ ಅಗ್ರಲೇಖನವನ್ನು ಸತ್ಯವಾದಿ ಪತ್ರಿಕಾಕರ್ತರು ಬರೆದಿರಬೇಕು. 'ಎಸ್ ಎಚ್' ರವರಿಗೇನೇ ಅನ್ವಯಿಸುವಂತೆ ಆ ಅಗ್ರಲೇಖನದಲ್ಲಿ ದೊಂದಿ ಹಚ್ಚಿ ಹುಡುಕಿದರೂ 'essen' ಎಂಬ ಹೆಸರು ಕಂಡು ಬರಲಿಲ್ಲ. ಇವರಿಗೇ ಹೇಗೆ ಫಕ್ಕನೆ ಹೊಳೆಯಿತೋ ಆಶ್ಚರ್ಯವಾಗುತ್ತ್ತ. 'ಕಂಡದ್ದು ಹೇಳಿದರೆ ಕೆಂಡದಂತಾ ಕೋಪ' ವಲ್ಲವೆ essen ಜೋಯಿಸರೇ? ತಾವು ಹೇಳಿ! ತಾವು ಎಷ್ಟು ವರುಷಗಳಿಂದ ತಮ್ಮ ಪಂಚಾಂಗವನ್ನು ಪ್ರಕಟಿಸುತ್ತಿರುವಿರಿ? ಹೇಗೆ ಪ್ರಚಾರದಲ್ಲಿವೆ? ದಯಮಾಡಿ ತಿಳಿಸಿ. ತಮ್ಮ ನಂ ೧ ಲೇಖನದಲ್ಲಿ ತಾವು ಹೇಳುವಂತೆ 'ಗಣಿತಶಾಸ್ತ್ರವೆಂದರೆ ಕೇವಲ 4×3=7 ಎಂದಲ್ಲ.' ಖಂಡಿತವಾಗಿಯೂ ಈ ಅಪದ್ಧಗುಣಾಕಾರವು ಗಣಿತದಲ್ಲಿ ಎಂದಿಗೂ ಆಗಲಾರದು. ಗಣಿತವು 4×3=12 ಎಂದು ಸಾರಿಸಾರಿ ತಮಗೂ ಸರ್ವರಿಗೂ ಉಪದೇಶಿಸುವುದು. ಸಾವಾಗಿಯೇ ತಪ್ಪುದಾರಿಯಲ್ಲಿ ಹೋಗಿ ವಿರುದ್ಧವಾಗಿ ಗುಣಿಸಿಕೊಂಡರೆ ಗಣಿತವೇನು ಮಾಡಬಲ್ಲದು. ಅಂತಹ ಮನಸ್ವಿ ಗಣಿತದಿಂದ ಸೂರ್ಯ ಚಂದ್ರಾದಿಗಳನ್ನೇ ಒಟ್ಟು ಆಪೋಶನ ತೆಗೆದುಕೊಂಡು ಸ್ಥಾನಭ್ರಷ್ಟರನ್ನಾಗಿ ಮಾಡಲೂಬಹುದು.

ಚಂದ್ರಗ್ರಹಣದ ವಿಷಯವನ್ನು ಚರ್ಚಿಸಿ ಅಗ್ರಲೇಖನದ ಅಭಿಪ್ರಾಯವನ್ನು ಗ್ರಹಿಸಿ ತದನುಸಾರವಾಗಿ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದರೆ ಎಷ್ಟು ಮೇಲಾಗಿರ್ತ್ತು. ಇವರ ವಾಸ್ತುರಿಯನ್ನು ಈ ಅಸಂಬದ್ಧ ಪ್ರಲಾಪದಲ್ಲಿ ಪರಿಣಮಿಸಿ ನಿಜವಾದ ಉತ್ತರವನ್ನು ಕೊಡದೆ 'ಅಪದ್ಧಕ್ಕೆ ಅಪ್ಪಣೆಯೇ' ಎಂದರೆ 'ಬಾಯಿಗೆ ಬಂದದ್ದೆಲ್ಲಾ' ಎಂದು ಮುಕ್ತಾಯಮಾಡಿಬಿಟ್ಟರು. ಇಷ್ಟಾದರೂ ತಮ್ಮ ಲೇಖನದಲ್ಲಿ '೨೫-೭-೩೫ನೇ ಸಂಪದಭ್ಯುದಯವನ್ನು ಈಗಲಾದರೂ ನೋಡಿದರೆ ಇನ್ನು ಮುಂದಾದರೂ ಹೀಗೆ ಒರೆಯಲಾರರೆಂದು ನಂಬಿದ್ದೇನೆ.' ಎಂದು ಊಕೆ ಪಟ್ಟಿರುವ ಕಾರಣ ಆ ಲೇಖಕರಿಗೆ ಇವರೂ ಸಂಬಂದವಿರುವಂತೆ ಭಾವನೆ ಕೊಟ್ಟಿರುವರು. ಅದನ್ನೂ ನೋಡಿದೆನು. ಅದಕ್ಕೆ ಸಂಬಂಧಪಟ್ಟ ಪಂಚಾಂಗವನ್ನೂ ನೋಡಿದೆನು. ಚಂದ್ರಗ್ರಹಣಕಾಲದಲ್ಲಿ ಪಂಚಾಂಗದಲ್ಲಿನ ಕಾಲನಿಷ್ಕರ್ಷೆಯನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ಹರ್ತ್ತಪತ್ರದಲ್ಲಿನ ಅದಕ್ಕೆ ವಿರೋಧವಾಗುವ ಕಾಲನಿಷ್ಕರ್ಷೆಯನ್ನೂ ಓದಿ ತಿಳಿದೆನು. ಈ ರೀತಿ ಗಣಿತ ಭೇದಕ್ಕೇನು ಕಾರಣ ಹೇಳಿ essenಜೋಯಿಸರೆ. ತಾವು ಹೇಳುವಂತೆ 4×3=7 ಎಂಬ ಗಣಿತದ ಫಲವಲ್ಲವೆ? ಇದೇಕಿಷ್ಟು ಅಭಾಸ! ಅಂತೂ ಚಂದ್ರಗ್ರಹಣ ತಮಗೊಬ್ಬರಿಗೆ ಮಾತ್ರ ಕಂಡಿತು ಹೇಗೆ? ದಯಮಾಡಿ ಉಸಿರಿ. ಗ್ರಹಣಕ್ಕೆ ಪೂರ್ವ ನಾನು ನೋಡಿದ ಪಂಚಾಂಗಗಳಲ್ಲಿ ನನ್ನ ವೈಸೂರಿನೇ ಚಂದ್ರಗ್ರಹಣವಿಲ್ಲವೆಂದು ಸ್ಥಾಪಿಸಿರುವ ಹಾವೇರಿ ಜ್ಯೋತಿಮಾರ್ತಾಂಡ ಪಂಡಿತ ಶ್ರೀ ಶಂಕರಶಾಸ್ತ್ರಿಗಳೂ ಮದರಾಸು ನಿವೃತ್ತಿಗಡ್ಡ ಮ|| ರಾ|| ರಾಮಯ್ಯ ಸಿದ್ಧಾಂತಿಗಳೂ ತೆಗ್ಗಿನಮಠದ ಹರಪನಹಳ್ಳಿ ಪಂಚಾಂಗಪ್ರಕಾಶಕರೂ ನಮ್ಮ ಶ್ರೀ ಅನಂತಪದ್ಮನಾಭ ಜ್ಯೋತಿಷ್ಕರ ಪುತ್ರರಾದ ಸಿದ್ಧಾಂತಿ ಸುಬ್ರಹ್ಮಣ್ಯ ಸಚ್ಚಿದಾನಂದ ಜ್ಯೋತಿಷ್ಕರೂ ನಿಮ್ಮಗಡ್ಡ ವೆಂಕಟ್ರಾಯಸಿಂಹ ಸಿದ್ಧಾಂತಿಗಳೂ ಮುಂತಾದವರು ನಮ್ಮ ದೇಶಕ್ಕೇ ಗ್ರಹಣದೃಶ್ಯವಲ್ಲವಾಗಿ ಗ್ರಹಣಾಭರಣವಿಲ್ಲವೆಂಬುದಾಗಿ ಏಕವಾಕ್ಯೆನಿಂದ ಹೇಳಿರುವುದು ನೀವೂ ಜ್ಯೋತಿಷ್ಕರಾಗಿ ತಿಳಿಯದಿರುವಿರಾ? ದಯಮಾಡಿ ಹೇಳಿ. ಅದೇ ರೀತಿ ನೋಡುವಿಲ್ಲದೆ ಸೂರ್ಯಾಸ್ತಮೆಯು ೪-೮-೩೫ ರಲ್ಲಿ ೬-೫೦ ಘಂಟೆಗೆ ಆದದ್ದು ಸರ್ವರೂ ನೋಡಿದಂತೆ ನೀವೂ ನೋಡಲಿಲ್ಲವೆ? ಪ್ರತಿವರಾಸಿನಲ್ಲಿಯೇ ಗ್ರಹಣವು ಕಾಣಲಿಲ್ಲವೆಂದು ಸರ್ಕಾರಿ Observatory ಯಿಂದ ಬಂದ 459 D O ಸಾರಾಂಶವನ್ನು 'essen (ee)'ರಾದ ತಮಗಾರೂ ತಿಳಿಸಲಿಲ್ಲವೆ

ಈಗಲಾದರೂ ತಮ್ಮ ಪಂಚಭೂತ ಸಾಕ್ಷಿಯಾಗಿ ಗ್ರಹಣವು ನಮಗಿಲ್ಲವೆಂಬುದು ನೋಡಿದಮೇಲಾದರೂ ತಿಳಿದುಕೊಂಡಿಲ್ಲವೆ? ಶಾಸ್ತ್ರತಃ ಕಂಡಿತೆಂದು ಬಾಹ್ಯತಃ ಜಂಡಿಸಿದರೆ ಯಾರೇನು ಮಾಡಲ್ಲರು. ಇದರ ಮೇಲೆ ನಿಮ್ಮ ಗಣಿತದ ಫಲ. 4×3=7 ನೀವೇ ಚಿಂತಿಸಿ ಇಷ್ಟಾದರೂ ನಮ್ಮ ಅಗ್ರಲೇಖಕರು ತಮ್ಮ ಮೂಢಭಕ್ತಿಯನ್ನು ಬಿಟ್ಟಿರಲಾರರು. ತಮ್ಮ ಶಾಸ್ತ್ರವಚನಕ್ಕೆ ಕಟ್ಟುಬಿದ್ದೇ ಇರುವರು. ಆದರೆ ಇಂತಹ ವೈಷಮ್ಯಪೂರಿತವಾದ ಅಪದ್ಧ ಸಾಧಿಸುವ ಈವಿಜ್ಞಾನಯುಗದಲ್ಲಿ ಸರ್ವರೂ ತಿಲಕಪ್ರಾಯವನ್ನು ಕೊಡುವಂತೆ ಮುಂದೆಯೂ ನಿರ್ಭಯರಾಗಿ ಸಾರಿಸಾರಿ ಹೇಳುವಷ್ಟರಲ್ಲಿ ಸ್ವಲ್ಪವೂ ಹಿಂಜರಿಯರೆಂದು ನಾನು ನಂಬಿರುವೆನು. ಚಂದ್ರೋದಯವು ಹುಣ್ಣಿಮೆಯನ್ನು ಹೆಚ್ಚಾ ಹಚ್ಚರನ್ನಾಗಿಯೂ ಸಮುದ್ರ ರಾಜನು ಚಂದ್ರನನ್ನೇ ಚುಂಬಿಸುವಂತೆ ಮಾಡುತ್ತದೆಂಬ ಕವಿಯ ವರ್ಣನೆಯಂತೆ ತಾವು ಹೇಳುವ ದೇವೋದ್ದೇಶವು ಒಪ್ಪಕ್ಕೆ ಮಾತ್ರಾಗಿರಲಿ. ಮೊದಲಿನ ಗಣಿತದಂತೆ ೧೫ ನಿಮಿಷವಾದರೂ ಅಥವಾ ಪುನರ್ಗಣಿತದಂತೆ ೨ ನಿಮಿಷವಾದರೂ ನಮ್ಮ ದೇಶದಲ್ಲಿ ಗ್ರಹಣರೂಪದಿಂದ ಕಾಣಿಸಿಕೊಳ್ಳಬೇಕೆಂಬ ತಮ್ಮ ವಾಗ್ದಂಡನೆಯು ಅಜ್ಞೆಯನ್ನು ವಿಶಾಖಪಟ್ಟಣ ಸಮುದ್ರತೀರವಾಸಿದವರಿಂದ ಚುಂಬಿಸಲ್ಪಡಲು ಚಂದ್ರನು ತಲೆಕಪ್ಪಿಸಿಕೊಂಡನಲ್ಲವೆ? ಜೋಯಿಸರೆ! ವಿಷಮ ಸಂಖ್ಯೆಯಲ್ಲಿ ಲಾಘವವೆಂಬಂತಾಗಿ ಗಣಿತದಲ್ಲಿ ೧೫ ನಿಮಿಷ ವ್ಯತ್ಯಾಸವು ಚಂದ್ರನಿಗೆ ವಿಷಮಶೀತಜ್ವರದಲ್ಲಿ ಏಳ್ಕೆವಾಯಿತಲ್ಲವೆ! ತಮ್ಮಂತೆ ವಿದ್ಯಾವಂತನಾಗದಿದ್ದರೂ ತಮ್ಮ ಗುರುತ್ವಕ್ಕೆ ಬದ್ಧನಾಗಿರುತ್ತೇನೆ. ಆದರೆ ಆದೇ ತಮ್ಮ ಚಂದ್ರನು ಉದಯವಾದಕೂಡಲೆ ಗ್ರಾಮಸಿಂಹವು ತನ್ನನ್ನು ಅಪಸ್ವರದಿಂದೇಕೆ ಸಂಭೋಧಿಸುವಂತೆ ಮಾಡುತ್ತಾನೆ? essen ಜೋಯಿಸರೆ! ದಯಮಾಡಿ ಈ ವಿಷಯದಲ್ಲಿ ನನ್ನ ಮಾಧ್ಯನನ್ನು ತಮ್ಮ ಗಣಿತದಿಂದ (4×3=7) ಹೋಗಲಾಡಿಸಿ! ಹೇ! ಜ್ಯೋತಿರ್ಮಣಿ! ಇನ್ನು ಮುಂದಾದರೂ ತಮ್ಮ ಗಣಿತವನ್ನವಧ್ಯಪಡಿಸದಂತೆ ಚಂದ್ರಸೂರ್ಯಾದಿಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡು 4×3=7 ಎಂಬುದನ್ನು ಬಿಟ್ಟು ಗಣಿತದ ಸರಿಯಾದ ಫಲವನ್ನು ಪ್ರಕಟಿಸುವುದು ಒಳ್ಳೆಯದಲ್ಲವೆ?

ಗ್ರಹಣವಿದ್ದರೆ ಯಾರೂ ಗ್ರಹಣವಿಲ್ಲವೆಂದು ಹೋಕಾಡುವುದಿಲ್ಲ ನಮ್ಮ ಸತ್ಯವಾದಿಗಳು ಸತ್ಯವನ್ನ ಸ್ಥಿರಪಡಿಸುವುದರಲ್ಲಿ ನಿರತರಾಗಿರುವುದರಿಂದ ಇಂತಹ ಶುಷ್ಕ ಖಂಡನದಿಂದ ವ್ಯಸನಪಡದೆ ಸತ್ಯವನ್ನೇ ಹೊರಪಡಿಸುವುದು ತಮ್ಮ ಕರ್ತವ್ಯವೆಂದು ತಿಳಿದಿರುವುದು ಬಿಡರೆಂದು ನಾನು ಸಂಪೂರ್ಣ ನಂಬಿರುವೆನು.

ಉಪಾಕರ್ಮವನ್ನಾದರೂ ಒತ್ತಟ್ಟು ಇಟ್ಟು ಗ್ರಹಣವಿಲ್ಲದಿದ್ದರೂ ಗ್ರಹಣಾಭರಣಿಸಬೇಕೆಂಬ ಉಪದೇಶವು "ಅನ್ಯಥಾ ಕೃತಂ ಅಕೃತಂ" ಅಲ್ಲವೆ? ಎಂದು ಇಲ್ಲಿಗೆ ನಿಂತಿರುವೆನು.

"ಸಮದೃಷ್ಟಿ ಜೋಯಿಸ"

Mysore Government Advertisements.

ಮೈಸೂರ್ ಗೌರ್ನ್‌ಮೆಂಟ್

11-8

ತಾ॥ ೨೦ ನೇ ಜುಲೈ ೧೯೨೫

ವ್ಯವಸಾಯಗಾರರಿಗೂ ಮಕ್ಕಳ ದನಕರುಗಳನ್ನು ಸಾಕತಕ್ಕ ರೈತರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮುಂದೆ ಖರೀದಿಗೆ ಹತ್ತು ವರ್ಷದ ವಯಸ್ಸಿಗೆ ಮೇಲ್ಪಟ್ಟು ಅನೇಕ ಹೆಣ್ಣು ರಾಸುಗಳು ಸಿದ್ಧವಾಗಿವೆ

ಸಾಲುವಾರು ರಾಸುಗಳು	ಖರೀದಿ : ಒಳ್ಳೇರಾಸುಗಳಿಗೆ	ಇತರ ರಾಸುಗಳಿಗೆ
1914	ರೂ 25	ರೂ 15
1913	20	10
1912	15	10
1911 ಮತ್ತು 1910	12	10
1909 ಮತ್ತು ಮೇಲೆ	10	5

ವಿ. ಸೂ—ಅಪೈಕೆ ಬಹಳ ಚೆನ್ನಾಗಿರತಕ್ಕ ರಾಸುಗಳಿಗೆ ಶೇಕಡ ೫೦ ರಂತೆ ಬೆಲೆ ಜಾಸ್ತಿ ಮೊಕರೂರ್ಮಾಡಿಯತ್ತೆ.

ಆರು ತಿಂಗಳು ವಯಸ್ಸಿನ ಒಳಗಿರತಕ್ಕ ಕರುಗಳನ್ನು ಅವುಗಳ ತಾಯಿ ಸಮೇತ ವಾರಲ್ಪಡುತ್ತೆ. ಇಂಥಾ ಕರುಗಳಿಗೆ ಈ ಕಳಗೆ ಕಂಡಂತೆ ಅಲಾಯಿದ ಬೆಲೆ ಮೊಕರೂರ್ಮಾಡಿರುತ್ತೆ.

1 ಗಂಡುಕರುಗಳು ರೂ ೨೫ ರಿಂದ ೪೦ ರವರೆಗೆ
2 ಹೆಣ್ಣುಕರುಗಳು ೧೦ ೩೦
ಬೆಲೆ ಅವುಗಳ ಕಂಡೀಷನ್ ಮೇಲೆ ಇರುತ್ತೆ

೨ ವ್ಯವಸಾಯಗಾರರೂ ಮತ್ತು ದನಗಳನ್ನು ಸಾಕತಕ್ಕ ರೈತರೂ ಸಹ ಮೇಲ್ಕಂಡಂತೆ ೨೦ ಹಸುಗಳನ್ನು ಕೊಂಡುಕೊಂಡಲ್ಲಿ, ಅಂಥವರುಗಳಿಗೆ ರಯಾಯಿತಿದರದಲ್ಲಿ ಮೂರು ವರ್ಷ ವಯಸ್ಸಿನ ಒಂದು ಬೀಜದ ಹೋರಿಯನ್ನು ಸಹ ೧೦೦ ರೂಪಾಯಿ ಕಮ್ಮಿ ಖರೀದಿಗೆ ಕೊಡಲಾಗುತ್ತೆ

೩ ಮೇಲ್ಕಂಡ ರೈತರೂ ಮತ್ತು ವ್ಯವಸಾಯಗಾರರೂ ಸಹ ಒಂದೇ ಲಾಟಿನಲ್ಲಿ ೧೯೦೯ ನೇ ಸಾಲು ಮತ್ತು ಅದಕ್ಕೆ ಹೆಚ್ಚು ವಯಸ್ಸುಳ್ಳ ೨೦ ಹೆಣ್ಣುರಾಸುಗಳನ್ನು ಕೊಂಡುಕೊಂಡಲ್ಲಿ ಅಂಥವರುಗಳಿಗೆ ರಾಸು ಒಂದಕ್ಕೆ ೫ ರೂಪಾಯಿ ಬೆಲೆ ಮೇರೆ ಕೊಡಲಾಗುತ್ತೆ.

೪ ಒಂದೂವರೆ ವರ್ಷ ವಯಸ್ಸುಳ್ಳ ಗಂಡುಕರುಗಳು ಒಂಟಿಯಾಗಿಯೇ ಆಗಲಿ ಜೊತೆಯಾಗಿಯೇ ಆಗಲಿ ಮತ್ತು ಒಂದು ಲಾಟೇ ಆಗಲಿ ಖಾಸ್ ಖರೀದಿಗೂ ಮತ್ತು ಹರಾಜಿಗೂ ಸಹ ಸಿದ್ಧವಾಗಿವೆ. ಮೇಲ್ಕಂಡ ಕರುಗಳನ್ನು ದರಖಾಸ್ತಿನ ಮೇಲೆ ಕೊಂಡು ಕೊಳ್ಳಲು ಅಪೇಕ್ಷೆಯುಳ್ಳವರು ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರಿಗೆ ತಮ್ಮ ದರಖಾಸ್ತುಗಳನ್ನು ಗುಜರಾಯಿಸಿಕೊಳ್ಳಬಹುದಾಗಿರುತ್ತೆ.

೫ ಪೂರಾ ಪೊಬಲಗು ದರಖಾಸ್ತು ಮಂಜೂರಾದ ಕೂಡ್ಲೆ ಕಟ್ಟಿ ರಾಸುಗಳು ಸುಘರ್ದಿಗೆ ಸಿಗೆದುಕೊಳ್ಳಬೇಕು

೬ ಯಾವ ಕಾಲದಲ್ಲಿ ಬೇಕಾದರೂ ರಾಸುಗಳನ್ನು ಖಾಸ್ ಖರೀದಿಗೆ ದರಖಾಸ್ತಿನ ಮೇಲೆ ಪಡೆಯಬಹುದು. ಈ ಬಗ್ಗೆ ಮೈಸೂರಿನಲ್ಲಿರುವ ಅಮೃತಮಹಲ್ ಇಲಾಖಾ ಸೂಪರಿಂಟೆಂಡೆಂಟರವರಿಗೇ ಆಗಲಿ ಅಥವ ನಿಮಗೆ ಸಮೀಪದಲ್ಲಿರುವ ಅಮೃತಮಹಲ್ ದರೋಗರವರಿಗೆ ಆಗಲೀ ಅರ್ಜಿಗ ಜರಾಯಿಸಿಕೊಳ್ಳಬಹುದು.

೭ ಬಾಕಿ ಹಣ್ಣು ಸಂಗತಿಯನ್ನು ದರೋಗರಿಂದ ತಿಳಿಯಬಹುದು.

ಎಂ. ಅಬ್ದುಲ್ಲಾ ಷರೀಫ್
ಸೂಪರಿಂಟೆಂಡೆಂಟ್

To Popularise your Business
in the Karnataka Provinces

YOU MUST ADVERTISE IN

the "SATYAVADI"

It is the cheapest and mostup-to-date Karnatic Weekly

It is read largely and widely

Itis circulated among all grades of persons

It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

FOR RATES ETC., APPLY TO
The SATYAVADI Office,
Mysore, S. India.

ಹನುಮಂತ ಉಪಾಸಕರ

ಅತ್ಯಲ್ಪ ಕ್ಯಕರವಾದ ಭವಿಷ್ಯದ್ವಾಕ್ಯಗಳು

ಚನಾಯಿಸಿ ನಿಮ್ಮ ಪ್ರಶ್ನೆಗಳನ್ನು ಚೆನ್ನಾಗಿ ಭದ್ರ ಪಡಿಸಿ ಮೊಹರುಮಾಡಿದ ಕವರಿನಲ್ಲಿ ಇಟ್ಟು ಕಳುಹಿಸಿ ಆ ಪ್ರಶ್ನೆಗಿಳಿಗೆ ತಕ್ಕ ಉತ್ತರಗಳೂ ಮತ್ತು ಬಿಚ್ಚಲ್ಪಡದೆ ಇರುವ ನಿಮ್ಮ ಕವರೂ ಕಳುಹಿಸಲ್ಪಡುವುದು. ಸಂಯಾದ ನಿಮ್ಮ ಜನನಕಾಲವನ್ನೂ ಮತ್ತು ದಿನವನ್ನೂ ಅಥವ ಕಾಗದ ಬರೆಯುವ ಕಾಲವನ್ನೂ ಬರದು ಕಳುಹಿಸಿ, ಕಳ್ಳತನ ಮತ್ತು ಸರ್ಕಾರಿ ಸಂಬಂಧವಾದ ಪ್ರಶ್ನೆಗಳಿಗೆ ಗಮನ ಕೊಡುವುದಿಲ್ಲ. ಪರೀಕ್ಷಾರ್ಥವಾದ ಪ್ರಶ್ನೆಗಳಿಗೆ ಉತ್ತರ ಕೊಡಲಾಗುವುದಿಲ್ಲ. ಗೃಹಗಳ ದುಷ್ಟೇಷ್ಟೆಗಳನ್ನು ಶಾಸ್ತ್ರೀಯವಾದ ಶಾಂತಿ, ಹೋಮ, ಜಪ ಮತ್ತು ಕವಚ ಇವುಗಳ ಮೂಲಕ ಪರಿಹಾರಮಾಡುವ ಕ್ರಮವನ್ನು ತಿಳಿಸುತ್ತೇವೆ. 30-7

ದರಗಳು—೫ ಪ್ರಶ್ನೆಗಳಿಗೆ ೧ ರೂಪಾಯಿ. ೫ ರ ಮೇಲೆ ಪ್ರತಿ ಪ್ರಶ್ನೆಗೂ ೪ ಆಣೆ. ೧ ವರ್ಷದ ಜನ್ಮ ಫಲಗಳನ್ನು ಶೋಧಿಸಿ ಬರೆದು ತಿಳಿಸುವದಕ್ಕೆ ೫ ರೂ. ಬೆಳ್ಳಿ ಹನುಮಂತ ಕವಚ ೧ ಕ್ಕೆ ರೂ ೩—೮—೦ (ದೂರ ದೇಶಗಳಿಗೆ ಅದಕ್ಕೆ ದ್ವಿಗುಣ) ವಿ.ಪಿ. ಜಾರ್ಜು ಹೆಚ್ಚು ಕೊಡಬೇಕು.

— ಅಭಿಪ್ರಾಯಗಳು —

ವಿ. ಪಿ. ಮೂಲ್ಕ ಒಂದು ಹನುಮಂತ ಕವಚವನ್ನು ದಯವಿಟ್ಟು ಕಳುಹಿಸಿ. ನನ್ನ ೫ ಪ್ರಶ್ನೆಗಳಿಗೆ ತಾವು ಕೊಟ್ಟ ಉತ್ತರಗಳಿಂದ ನಾನು ತೃಪ್ತಿಪಟ್ಟಿರುವೆನು. ಈ ತ್ತು ಸ್ವಪ್ನದಲ್ಲಿಯೂ ಹನುಮಂತ ದೇವರನ್ನು ನೆನ್ನೆ ರಾತ್ರಿ ಕಂಡೆನು. ಧಾನೇಶ್ವರ ವಾಜೀರ್ಖಾ

ಜಗ್ಗೀರ್ ದಯಾಲ್ ಒಂಗಲೆ, ಘಾಟ್ ಕೂಪರ್

ನಿಮ್ಮ ನಂ. ೧೧೫೭ ತಾ॥ ೧೭—೧—೨೫ ರ ಕಾಗದದಲ್ಲಿ ಸೂಚಿಸಿದ್ದಂತೆ ಮಾರ್ಕಾಪುರದಿಂದ ಕೊಯಿಲ್ ಕುಂಡಕ್ಕೆ ನನಗೆ ವರ್ಗವಾಯಿತು. ನನಗೆ ಒಂದು ಹನುಮಂತ ಕವಚವನ್ನು ದಯವಿಟ್ಟು ವಿ. ಪಿ. ಮೂಲ್ಕ ಕಳುಹಿಸಿಕೊಡಿ. ಸಿ. ದೊರಸಾಮಿನಾಯಿಡು

೫—೨—೨೫ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್
ಕೊಯಿಲ್‌ಕುಂಡ, ಕರ್ನೂಲ್ ಡಿಸ್ಟ್ರಿಕ್ಟ್

ಪತ್ರವ್ಯವಹಾರ ಇಂಗ್ಲೀಷಿನಲ್ಲಿಯೇ ಇರಬೇಕು.

Proprietor **Malayala Mantrashala**

THE
MYSORE PRESS
RAMAVILAS ROAD
MYSORE

We undertake to print

JOBS — BOOKS
&
PERIODICALS

Neat Workmanship
Moderate Charges
Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್

ರಮಾವಿಲಾಸ ಅಗ್ರಹಾರ

ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—

ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ!!!

ಬಿ. ಎಸ್. ಮೂರ್ತಿ, ಬಿ. ಎ
ಪ್ರೊಪ್ರೈಟರ್.

Printed and Published by B.S.Murthy, B.A. at the Mysore Press, Mysore, for the Editor